

# ಎರಡು ಚಿತ್ರಗಳಿಂದ ಹೊರಬಂದ ಕಾರ್ತಿಕ್ ಆರ್ಯನ್

ಕೋವಿಡ್ ಅಲೆಗಳು ಕೂಲಿ ಕಾರ್ಮಿಕರನ್ನು, ನಿತ್ಯದ ದುಡಿಮೆ ನೆಚ್ಚಿಕೊಂಡವರನ್ನು ಹಣ್ಣುಗಾಯಿ ಮಾಡಿರುವುದರ ಬಿಸಿ ಅನುಭವಿಸುತ್ತಿದ್ದೇವೆ. ಮನರಂಜನಾ ಉದ್ಯಮದಲ್ಲಿ ಗಾಜಿನ ಮನೆಯಲ್ಲಿ ಇರುವವರಿಗೂ ಈ ಕಾಲ ಖುಷಿಯದ್ದಲ್ಲ. ಈಗಿನ್ನೂ ನೆಲೆ ಕಂಡುಕೊಳ್ಳುತ್ತಿರುವ ನಟ ಕಾರ್ತಿಕ್ ಆರ್ಯನ್ ಎರಡೆರಡು ಸಿನಿಮಾಗಳಿಂದ ಹೊರಗೆ ಬಂದಿರುವ ಸುದ್ದಿ ಇದಕ್ಕೆ ಪುಷ್ಟಿ ಕೊಡುವಂತಿದೆ.

ಕರಣ್ ಜೋಹರ್ ನಿರ್ದೇಶನದ ‘ದೋಸ್ತಾನಾ 2’ ಹಿಂದಿ ಸಿನಿಮಾದಿಂದ ಹೊರಬಂದ ಮೇಲೆ ಇದೀಗ ರೆಡ್ ಚಿಲ್ಲೀಸ್ ನಿರ್ಮಾಣ ಸಂಸ್ಥೆಯ ಇನ್ನೊಂದು ಚಿತ್ರಕ್ಕೂ ಅವರು ಬೆನ್ನುಮಾಡಿರುವ ಸುದ್ದಿ ಹೊರಬಿದ್ದಿದೆ.

ನಿರ್ದೇಶಕ ಅಜಯ್ ಬೆಹ್ಲ್ ‘ಗುಡ್‌ಬೈ ಫ್ರೆಡ್ಡಿ’ ಎಂಬ ಶೀರ್ಷಿಕೆಯ ಚಿತ್ರಕಥೆಯ ತಿರುಳನ್ನು ಎರಡು ವರ್ಷಗಳ ಹಿಂದೆ ಕಾರ್ತಿಕ್‌ಗೆ ಹೇಳಿದ್ದರು. ಸಸ್ಪೆನ್ಸ್ ಥ್ರಿಲ್ಲರ್ ಕೇಳಿ ನಟನಿಗೆ ಸಹಜವಾಗಿಯೇ ರೋಮಾಂಚನವಾಗಿತ್ತು. ಥಟ್ಟನೆ ಅವರು ಅಭಿನಯಿಸಲು ಒಪ್ಪಿದ್ದರು. ಶಾರುಖ್ ಖಾನ್ ಒಡೆತನದ ರೆಡ್ ಚಿಲ್ಲೀಸ್ ಆಮೇಲೆ ಅವರಿಗೆ ಎರಡು ಕೋಟಿ ರೂಪಾಯಿ ಮುಂಗಡ ಹಣವನ್ನೂ ಕೊಟ್ಟಿತ್ತು.

ಕಳೆದ ವರ್ಷ ಕೋವಿಡ್ ವ್ಯಾಪಿಸಿದ ಮೇಲೆ ಅಜಯ್ ಬೆಹ್ಲ್ ಚಿತ್ರಕಥಾ ರಚನೆ ಪ್ರಕ್ರಿಯೆ ನಿಧಾನವಾಯಿತು. ಅಷ್ಟರ ನಡುವೆ ‘ಧಮಾಕ’ ಎಂಬ ಇನ್ನೊಂದು ಸಿನಿಮಾ ಚಿತ್ರೀಕರಣವನ್ನು ಕಾರ್ತಿಕ್ ಮುಗಿಸಿಕೊಂಡರು. ಆ ಸಿನಿಮಾದ ಚಿತ್ರೀಕರಣ ನಂತರದ ಕೆಲಸಗಳು ನಡೆಯುತ್ತಿವೆ. ಕೋವಿಡ್ ಅಲೆಗಳೆಲ್ಲ ತಗ್ಗಿದ ಮೇಲೆ ಅದು ತೆರೆಕಾಣಲಿದೆ. ಆ ಚಿತ್ರವೂ ಸಸ್ಪೆನ್ಸ್ ಥ್ರಿಲ್ಲರ್ ಆಗಿದ್ದು, ಅಂತಹುದೇ ಮಾದರಿಯ ಇನ್ನೊಂದು ಸಿನಿಮಾದಲ್ಲಿ ತಕ್ಷಣಕ್ಕೆ ಅಭಿನಯಿಸುವುದು ಥರವಲ್ಲ ಎಂದು ಕಾರ್ತಿಕ್ ನಿರ್ಧರಿಸಿದ್ದಾರೆ. ಅಜಯ್ ಮೊದಲು ಹೇಳಿದ್ದ ಒನ್‌ಲೈನರ್ ಕಥಾವಿಸ್ತರಣೆಯ ನಂತರ ಮನಮುಟ್ಟುವಂತೆ ಇಲ್ಲ ಎಂದೂ ಅವರಿಗೆ ಅನಿಸಿದೆಯಂತೆ. ಹೀಗಾಗಿ ಇಬ್ಬರ ನಡುವಿನ ಸೃಜನಶೀಲ ಭಿನ್ನಾಭಿಪ್ರಾಯ ಕೂಡ ಚಿತ್ರದ ನಿರಾಕರಣೆಗೆ ಕಾರಣ ಎನ್ನಲಾಗಿದೆ.

ರೆಡ್ ಚಿಲ್ಲೀಸ್ ನಿರ್ಮಾಣ ಸಂಸ್ಥೆಗೆ ತಾವು ಪಡೆದ ಮುಂಗಡ ಹಣವನ್ನು ವಾಪಸ್ ನೀಡಿ, ಕಾರ್ತಿಕ್ ಯೋಜನೆಯಿಂದ ಹೊರಬಂದಿರುವುದು ಹೊಸ ನಟರೂ ಎಷ್ಟರ ಮಟ್ಟಿಗೆ ‘ಚೂಸಿ’ ಆಗುತ್ತಿದ್ದಾರೆ ಎನ್ನುವುದಕ್ಕೆ ಉದಾಹರಣೆ. ■



ಜಾಹ್ನವಿ

# ಮಹೇಶ್ ಬಾಬುಗೆ ಮೂವರು ನಾಯಕಿಯರು

ತ್ರಿವಿಕ್ರಮ್ ಶ್ರೀನಿವಾಸ್ ನಿರ್ದೇಶನದ ಹೊಸ ತೆಲುಗು ಚಿತ್ರದಲ್ಲಿ ಮಹೇಶ್ ಬಾಬು ನಟಿಸುವುದು ನಿಕ್ಕಿಯಾದದ್ದು ಹಳೆಯ ಸುದ್ದಿ. ನಿವೇದಿತಾ ಥಾಮಸ್, ಪೂಜಾ ಹೆಗ್ಡೆ ಹಾಗೂ ಜಾಹ್ನವಿ ಕಪೂರ್ ಮೂವರೂ ಆ ಚಿತ್ರಕ್ಕೆ ನಾಯಕಿಯರಾಗಿ ಆಯ್ಕೆಯಾಗಿದ್ದಾರೆನ್ನುವುದು ಹೊಸ ಸುದ್ದಿ.

‘ವಕೀಲ್‌ಸಾಬ್’ ಚಿತ್ರದಲ್ಲಿ ನಿವೇದಿತಾ ಅಭಿನಯ ಕೌಶಲ ನೋಡಿ ತ್ರಿವಿಕ್ರಮ್ ಅವರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಬೋನಿ ಕಪೂರ್ ತಮ್ಮ ಮಗಳನ್ನು ತೆಲುಗು ಚಿತ್ರರಂಗಕ್ಕೆ ದೊಡ್ಡ ಮಟ್ಟದಲ್ಲಿ ಪರಿಚಯಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದರ ಫಲವಾಗಿ ಈ ಸಿನಿಮಾದಲ್ಲಿ ಜಾಹ್ನವಿ ನಟಿಸುವುದು ಬಹುತೇಕ ಖಚಿತವಾಗಿದೆ. ಶ್ರೀದೇವಿ ಪುತ್ರಿ ಜಾಹ್ನವಿ ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ಅಭಿಮಾನಿ ಬಳಗವನ್ನು ಸೃಷ್ಟಿಸಿಕೊಂಡಿದ್ದಾರೆ.

ಸದ್ಯಕ್ಕೆ ಕೀರ್ತಿ ಸುರೇಶ್ ನಾಯಕಿಯಾಗಿ ನಟಿಸುತ್ತಿರುವ, ಪರಶುರಾಂ ನಿರ್ದೇಶನದ ‘ಸರಕಾರಿ ವಾರಿ ಪಾಠ’ ಚಿತ್ರದಲ್ಲಿ ಮಹೇಶ್ ಬಾಬು ನಟಿಸುತ್ತಿದ್ದಾರೆ. ಅದರ ಕೆಲಸಗಳು ಮುಗಿದ ನಂತರ ತ್ರಿವಿಕ್ರಮ್ ಚಿತ್ರದತ್ತ ಅವರು ನಿಗಾ ವಹಿಸಲಿದ್ದಾರೆ.

‘ಸನ್ ಆಫ್ ಸತ್ಯಮೂರ್ತಿ’, ‘ಅಜ್ಞಾತವಾಸಿ’, ‘ಅರವಿಂದಾ ಸಮೇತ ವೀರ ರಾಘವ’, ‘ಅಲಾ ವೈಕುಂಠಪುರಮುಲೊ’ ತರಹದ ಹಿಟ್ ಚಿತ್ರಗಳನ್ನು ನಿರ್ದೇಶಿಸಿರುವ ತ್ರಿವಿಕ್ರಮ್, ತಮ್ಮ ಸ್ಟೈಲಿಶ್ ಆದ ಚಿತ್ರಕಥಾ ನಿರೂಪಣೆಗೆ ಹೆಸರುವಾಸಿ. ಹೊಸ ಚಿತ್ರದಲ್ಲಿ ಅವರು ಮಹೇಶ್ ಬಾಬು ಅವರನ್ನು ಅಲ್ಟ್ರಾ ಸ್ಟೈಲಿಶ್ ಆಗಿ ತೆರೆಗೆ ತರಲು ಸಿದ್ಧತೆ ನಡೆಸಿದ್ದಾರೆ. ಮಹೇಶ್ ಬಾಬು ವರ್ಚಸ್ಸನ್ನು ಇನ್ನೂ ಒಂದು ಹಂತ ಮೇಲಕ್ಕೆ ತೆಗೆದುಕೊಂಡು ಹೋಗಬೇಕೆಂದು ಅವರು ಆಪ್ತೇಷ್ಟರಲ್ಲಿ ಹೇಳಿಕೊಂಡಿದ್ದಾರೆ. ಇನ್ನೂ ಈ ಚಿತ್ರಕ್ಕೆ ಹೆಸರಿಟ್ಟಿಲ್ಲ. ‘ಅಯ್ಯಪ್ಪನುಂ ಕೋಶಿಯುಂ’ ಮಲಯಾಳಂ ಚಿತ್ರವು ತೆಲುಗಿನಲ್ಲೂ ರೀಮೇಕ್ ಆಗುತ್ತಿದ್ದು, ಅದಕ್ಕೆ ಚಿತ್ರಕಥೆಯನ್ನು ಇದೇ ತ್ರಿವಿಕ್ರಮ್ ರಚಿಸಿದ್ದಾರೆ.

■ ವಿಶಾಖ



ನಿವೇದಿತಾ ಥಾಮಸ್



ಪೂಜಾ ಹೆಗ್ಡೆ